# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ,
ಬೃ.ಬೆಂ.ಮ.ಪಾಲಿಕೆ ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು

ಸಂಖ್ಯೆ:ಸ.ಇಂ/ವಾ–118/ವಾರ್ಡ್‌ಸಭೆ/2022–23 ದಿನಾಂಕ: 23/5/22

## ವಾರ್ಡ್ –118ರ ವಾರ್ಡ್ ಸಭೆಯ ನಡವಳಿ

ದಿನಾಂಕ:21–05–2022 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್–118ರ ವಾರ್ಡ್ ಕಛೇರಿಯಲ್ಲಿ ಡಾ!!. ಚಂದ್ರಯ್ಯ.ಟಿ. ಉಪ ನಿರ್ದೇಶಕರು ಪಶುಪಾಲನೆ ವಾರ್ಡ್–118 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದವರು:–

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಡಾ!!. ಚಂದ್ರಯ್ಯ.ಟಿ. | ನೋಡಲ್ ಅಧಿಕಾರಿಗಳು | 9902041310 |
| 2 | ಶ್ರೀ.ಕೆ.ಎಸ್.ವಿಜಯ್‌ಕುಮಾರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:118 | 9480688118 |
| 3 | ಶ್ರೀ.ಎಸ್.ಕುಮಾರ್‌ವೇಲು | ಹಿರಿಯ ಆರೋಗ್ಯ ಪರಿವೀಕ್ಷಕರು | 9480688745 |
| 4 | ಶ್ರೀ.ಆರ್.ವೀರಯ್ಯ | ಕಿರಿಯ ಆರೋಗ್ಯ ಪರಿವೀಕ್ಷಕರು | 9844859560 |
| 5 | ಶ್ರೀ.ಎಂ.ಸುರೇಂದ್ರ | ಟಿ.ಐ ಸಹಾಯಕ ಕಂದಾಯ ಅಧಿಕಾರಿ (ಮಾರುಕಟ್ಟೆ–ದಕ್ಷಿಣ) | |
| 6 | ಶ್ರೀಮತಿ. ಚಂದ್ರಕಾಂತ್ | ಸಹಾಯಕ ಕಂದಾಯ ಅಧಿಕಾರಿ | |
| 7 | ಎ.ಪಳಿನಿಸ್ವಾಮಿ | – | 97419192926 |
| 8 | ಅರವಿಂದ | ಬಿ.ಡಬ್ಲೂ.ಎಸ್.ಎಸ್.ಬಿ | |
| 6 | ಜಾಕ್ | ಸ್ಥಳೀಯರು | |

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಎಲ್ಲರನ್ನು ಸ್ವಾಗತದೊಂದಿಗೆ ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

## ಚರ್ಚಿಸಲಾದ ವಿಷಯಗಳು:–

### 1. ಕಾಮಗಾರಿ ಇಲಾಖೆ:–

ಕಾಮಗಾರಿ ವಿಷಯವಾಗಿ ಚರ್ಚಿಸಲಾಗಿ ಸ್ಥಳೀಯರು ವಿನೋಭನಗರದಲ್ಲಿ ಡ್ರಬೀಸ್‌ಗಳನ್ನು ತೆರವುಗೊಳಿಸಬೇಕೆಂದು, ಹಾಗೂ ವಿನೋಭನಗರ ಶೌಚಾಲಯದ ಬಾಗಿಲುಗಳನ್ನು

ದುರಸ್ಥಿಗೊಳಿಸಬೇಕೆಂದು ಕೋರಿರುತ್ತಾರೆ. ವಿನೋಭನಗರ 1ನೇ, 2ನೇ, 3ನೇ ಅಡ್ಡರಸ್ತೆಗಳಿಗೆ ಕಾಂಕ್ರೀಟ್ ಹಾಕಬೇಕೆಂದು ಕೋರಿರುತ್ತಾರೆ. ಹಾಗೂ ವಿನೋಭನಗರ 2ನೇ ಅಡ್ಡರಸ್ತೆಯಲ್ಲಿ ಆರ್.ಸಿ.ಸಿ.ಮೋರಿಯನ್ನು ನಿರ್ಮಿಸಬೇಕೆಂದು ಕೋರಿರುತ್ತಾರೆ. ಮುನೇಶ್ವರ ಸ್ವಾಮಿ ದೇವಸ್ಥಾನದ ಸುತ್ತಮುತ್ತ ತಗ್ಗಾಗಿದ್ದು, ಈ ಜಾಗಕ್ಕೆ ಕಾಂಕ್ರೀಟ್ ಹಾಕಬೇಕೆಂದು ಕೋರಿರುತ್ತಾರೆ. ವಿನೋಭನಗರದಲ್ಲಿ ಕಾಂಕ್ರೀಟ್‌ನಿಂದ ಮುಚ್ಚಿ ಹೋಗಿರುವ ಬೋರ್‌ವೆಲ್ ಅನ್ನು ತೆಗೆದು ದುರಸ್ಥಿಗೊಳಿಸಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ. ಹಾಗೂ ನಾಲಾ ರಸ್ತೆ ಹಾಗೂ ಸಿದ್ದಯ್ಯ ರಸ್ತೆಯಲ್ಲಿ ರಸ್ತೆ ಮೂಲಭೂತ ಸೌಕರ್ಯ ರವರು ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಬೋರ್‌ವೆಲ್ ಮುಚ್ಚು ಹಾಕಿರುವುದಾಗಿ ತಿಳಿಸಿರುತ್ತಾರೆ. ಬೋರ್‌ವೆಲ್ ನಿಂದ ಟ್ಯಾಂಕ್‌ಗೆ ನೀರು ಬರುತ್ತಿದ್ದು, ಟ್ಯಾಂಕ್‌ನಿಂದ ಮನಗೆ ಬರುವ ನೀರು ಸರಾಗವಾಗಿ ಬರುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಮಾನ್ಯ ನೋಡಲ್ ಅಧಿಕಾರಿಗಳು ರವರು ಅನುಮತಿಯೊಂದಿಗೆ ವಾರ್ಡ್ ಅಭಿಯಂತರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2022-23ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ಸಂಖ್ಯೆ 118 ರಲ್ಲಿನ ಚರಂಡಿ ಹಾಗೂ ಪಾದಚಾರಿ ಮಾರ್ಗಗಳ ದುರಸ್ಥಿಗಾಗಿ ಹಾಗೂ ವಾರ್ಷಿಕ ನಿರ್ವಹಣೆಗಾಗಿ ಮೀಸಲಿಟ್ಟಿರುವ ರೂ. 30.00 ಲಕ್ಷಗಳ ಅನುದಾನಕ್ಕೆ ಅನುಮೋದನೆ ನೀಡುವಂತೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ವಿಷಯವಾಗಿ ಚರ್ಚಿಸಲಾಗಿ ಸದರಿ ಕಾಮಗಾರಿ ("Name of Work: Annual maintenance and Improvements of footpath and drains in ward 118-30.00 lakhs") ಸರ್ವಾನುಮತಿದಿಂದ ಸಭೆಯ ಅನುಮೋದನೆ ಪಡೆಯಲಾಯಿತು.

## 2. ಘನತ್ಯಾಜ್ಯ ವಿಭಾಗ:-

ಘನತ್ಯಾಜ್ಯ ವಿಷಯವಾಗಿ ಸಿದ್ದಯ್ಯ ರಸ್ತೆಯಲ್ಲಿರುವ ಲಾರಿ Point ಅನ್ನು ಬೇರೆ ಕಡೆಗೆ ಸ್ಥಾಳಂತರಿಸಬೇಕೆಂದು ಕೋರಿರುತ್ತಾರೆ.

## 3. ಆರೋಗ್ಯ ಇಲಾಖೆ

ಸಭೆಯಲ್ಲಿ ಸ್ಥಳೀಯರು ಮಾತನಾಡಿ, ವಾರ್ಡ್‌ನಲ್ಲಿ ಸೊಳ್ಳೆಗಳು ಹೆಚ್ಚಾಗಿರುವುದರಿಂದ Fogging and Spraying ಅನ್ನು ಮಾಡಲು ಕೋರಿರುತ್ತಾರೆ.

## 4. ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆ

ವಿನೋಭನಗರ 1ನೇ, 2ನೇ, 3ನೇ ಅಡ್ಡರಸ್ತೆಗಳಲ್ಲಿ ಒಳಚರಂಡಿ ಕೊಳವೆಯನ್ನು ಅಳವಡಿಸಲು ರಸ್ತೆಯನ್ನು ಅಗೆದು ಡ್ರಬೀಸ್ ಅನ್ನು ತೆರವುಗೊಳಿಸಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಮಳೆ ಹೆಚ್ಚಾಗಿರುವುದರಿಂದ ದೂರುಗಳನ್ನು ಕೂಡಲೇ ಸ್ಪಂದಿಸಬೇಕೆಂದು ತಿಳಿಸಿರುತ್ತಾರೆ ಹಾಗೂ ಮುಂದಿನ ಸಭೆಗೆ ಕಡ್ಡಾಯವಾಗಿ ಎಲ್ಲಾ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚಿಸಿ, ತಪ್ಪಿದಲ್ಲಿ ಹಾಜರಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಿರುತ್ತಾರೆ. ಹಾಜರಿದ್ದ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ –118 ಸುಧಾಮನಗರ

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 118